ಶ್ರೀ ಕೆ. ಎಚ್. ಹನುಮೇಗೌಡ.—ಹಿಂದಿನ ಸರ್ಕಾರದವರು ಒಂದು ನಿರ್ಣಯ ತೆಗೆದುಕೊಂಡಿದ್ದರು ಎಂದು ಕೇಳಿದ್ದೇನೆ. ಕೆರೆ ಕೋಡಿ ಬಿದ್ದಾಗ ಫ್ರೀ ಬೋರ್ಡ್ ಲೆವಲ್ ಎಂದು ಹೇಳುತ್ತೀರಿ. ಅದಕ್ಕೆ ಮಿಕ್ಕ ಜಮೀನು ಕೆರೆ ಅಂಗಳ ವಲ್ಲ. ಮೇಲ್ಬಾಗದ ಜಮೀನನ್ನು ಹರಾಜು ಹಾಕುವುದರಿಂದ ಸುಮಾರು ಮೂರು ಕೋಟಿ ರೂಪಾಯಿ ಉತ್ಪತ್ತಿ ಬರುತ್ತದೆ. ಆ ಉತ್ಪತ್ತಿಯನ್ನು ಸೆವಲಪ್‌ಮೆಂಟ್ ವರ್ಕ್ಸ್‌ಗೆ ಉಪಯೋಗಿಸಬಹುದು ಎಂದು ಹಿಂದಿನ ಸರ್ಕಾರ ನಿರ್ಣಯ ತೆಗೆದು ಕೊಂಡಿದೆ ಎಂದು ಪೇಪರಿನಲ್ಲಿ ಓದಿದ್ದೇನೆ. ಅದು ತಮ್ಮ ಗಮನಕ್ಕೆ ಬಂದಿದೆಯೇ? ಆದರ ಬಗ್ಗೆ ಅಂತಿಮವಾಗಿ ನಿರ್ಣಯ ಏನು ತೆಗೆದುಕೊಂಡಿದ್ದೀರಿ?

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಫ್ರೀ ಬೋರ್ಡ್ ಇರತಕ್ಕ ಜಮೀನು ಕೆರೆ ಅಂಗಳಕ್ಕೆ ಸೇರತಕ್ಕದ್ದಲ್ಲ. ಆದುದರಿಂದ ಈ ಪ್ರಶ್ನೆ ಉದ್ಭವವಾಗುವುದಿಲ್ಲ.

ಶ್ರೀ ಎಂ. ಬಿ. ರಾಮಸ್ವಾಮಿ.—ಸ್ವಾಮಿ, ತಾವು (ಆ) ಪ್ರಶ್ನೆಗೆ ಉತ್ತರವಾಗಿ ಕೆಲವು ರೈತರಿಗೆ ತೊಂದರೆಯಾಗಿದೆ ಎಂದು ಹೇಳಿದ್ದೀರಿ. ಎಷ್ಟು ಜನ ರೈತರಿಗೆ ತೊಂದರೆಯಾಗಿದೆ? ಕೆರೆ ಅಂಗಳದ ಅಚ್ಚುಕಟ್ಟುದಾರರು ಯಾರು ಯಾರಿಗೆ ತೊಂದರೆಯಾಗಿದೆ ಎಂದು ಹೇಳುತ್ತೀರಾ? ಮತ್ತು ಎಷ್ಟು ಎಕರೆ ಜಮೀನು ಇದರಲ್ಲಿ ಸೇರಿದೆ ಎಂದು ಹೇಳುತ್ತೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ವಿವರಗಳನ್ನು ಮೊದಲೇ ಕೇಳಿದ್ದರೆ ನಾನು ತಮಗೆ ಕೊಡುತ್ತಿದ್ದೆ

UTILISATION OF FUNDS OF TEMPLES, ETC., FOR NATION BUILDING ACTIVITIES

25. Sri K. R. SRINIVASULU NAYUDU.—(Shanthinagar)

4. Will the Minister for Revenue be pleased to state:—

(*a*) the number of Temples, Mutts, Churches and Mosques existing in the State;

(*b*) the size of property such as lands, cash, building and jewellary held by them;

(*c*) whether there is any scheme before the Government to utilise these properties for educational institutions and other nation building activities in the State as in Tirupathi;

(*d*) whether Government intends to create a separate Ministry for Charitable Endowments in the State?

SRI N. HUTCHAMASTHY GOWDA (Minister for Revenue).—

(*a*) The particulars of the number of institutions coming under the purview of the Department of Religious and Charitable Endowments are mentioned below :

Temples	*Mutts*	*Churches*	*Mosques*
	OLD MYSORE AREA		
14,510	176	—	367
	BOMBAY KARNATAK AREA		
7,704	5 9	34	789
	HYDERABAD KARNATAKA AREA		
6,740	1,169	81	1,188
	MADRAS KARNATAKA AREA		
3,160	52	—	—
	COORG DISTRICT		
12	—	—	—

(*b*)	*Lands*	*Cash*	*Building*	*Jewellery*
	A G	Rs. Ps.		
Bombay Karnataka Area.	2,09,979-23	Information not readily available.		—
Bidar District.	5,825-35	4[illegible]-63	No. of houses-3. No. of shops-3.	

(SRI N. HUTCHAMASTHY GOWDA)

Gulbarga District.	34,979-94	65,681-95	97 rooms	Gold: 2,205 gms. Silver: 2,098 gms.

	Lands A. G.	*Cash* Rs. Ps.	*Building*	*Jewellery*
Raichur District.	54,285-11	2,94,789-00	45 houses and shops.	Gold: 401 tolas. Silver: 3,043 tolas.
Old Mysore Area, Madras Karnataka Area and Coorg Area.	Information not available			

(*c*) There is no such scheme. As the cash, jewellery and properties have been donated by devotees for a specific purpose, they cannot be diverted for any other purposes.

(*d*) No such proposal

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು : ಸ್ವಾಮಿ, ತಾವು ಕೊಟ್ಟಿರ ತಕ್ಕ ಉತ್ತರ ನೋಡಿ, ಒಂದು ವರ್ಷಕಾಲ ತೆಗೆದುಕೊಂಡು ಅನಂಪೂರ್ಣ ವಾದಂಥ, ನಿರಾಶಾದಾಯಕವಾದಂಥ ಉತ್ತರ ಕೊಟ್ಟಿರುವುದು ಬಹಳ ವಿಷಾದ ವಾಗುತ್ತದೆ. ಈಗ ತಮ್ಮ ಅಂಕಿ ಅಂಶ ಪ್ರಕಾರ ನೋಡಿದರೆ ಸುಮಾರು 32000 ದೇವಸ್ಥಾನಗಳಿವೆ. 1956 ಮಠಗಳಿವೆ. 117 ಚರ್ಚ್‌ಗಳಿವೆ. 2344 ಮಸೀದಿಗಳಿವೆ ಇದರಲ್ಲಿ ತಾವು 'ಅ' ಗೆ ಉತ್ತರ ಕೊಡುತ್ತಾ ಹಳೇ ಮೈಸೂರು ಮತ್ತು ಮದ್ರಾಸ್ ಕರ್ನಾಟಕ ಪ್ರದೇಶಗಳಿಂದ ದೊರೆಯುವಂತಿಲ್ಲ ಎಂದು ಹೇಳಿದಿರಿ. ಇದನ್ನು ಕಂಡರೆ ಮುಜರಾಯ್ ಇಲಾಖೆ ಇದೆಯೇ? ಕೆಲಸ ಮಾಡುತ್ತಿದೆಯೇ? ದೇವಸ್ಥಾನ ಜೀರ್ಣೋದ್ಧಾರ ಯಾವರೀತಿ ಮಾಡುತ್ತೀರಿ ಎಂದು ಹೇಳುತ್ತೀರಾ ?

† ಶ್ರೀ ಎನ್. ಹುಚ್ಚಮಾಸ್ತಿಗೌಡ : ಸ್ವಾಮಿ, ಮೈಸೂರು ರಾಜ್ಯದಲ್ಲಿ ತಾಲ್ಲೂಕು ಆಫೀಸು ಮಟ್ಟದಲ್ಲಿ ಮುಜರಾಯ್ ಇನ್‌ಸ್ಟಿಟ್ಯೂಷನ್ಸ್‌ಗೆ ಸಂಬಂಧ

ಪಟ್ಟಹಾಗೆ ಒಬ್ಬ ಕ್ಲಾರ್ಕ್ ಮತ್ತು ಒಂದು ಪುಸ್ತಕ ಇದೆ. ಈ ಪುಸ್ತಕದಲ್ಲಿ ಪ್ರತಿಯೊಂದು ಇನ್‌ಸ್ಟಿಟ್ಯೂಷನ್ಸಿಗೆ ಸೇರಿದ ಜಮೀನು ಎಷ್ಟು ? ಯಾರುಯಾರಿಗೆ ಗೇಣಿಗೆ ಕೊಟ್ಟಿದೆ, ಗೇಣಿ ಎಷ್ಟು ಬರಬೇಕು ಮತ್ತು ಜಮೀನುಗಳನ್ನು ಯಾವ ವರ್ಷ ಹರಾಜುಮಾಡಿದೆ ಜ್ಯೂಯಲ್ಸ್ ಎಷ್ಟು ಇದೆ? ಕ್ಯಾಷ್ ಎಷ್ಟಿದೆ? ಇದನ್ನೆಲ್ಲ ಬರೆಯಬೇಕು ಎಂದು ನಿಗದಿಮಾಡಿದೆ. ನಾನು ಅನೇಕ ಕಛೇರಿಗಳಲ್ಲಿ ನೋಡಿದ್ದರಲ್ಲಿ ಅನೇಕ ಕಛೇರಿಗಳಲ್ಲಿ ಪೂರಾ ಸಮಾಚಾರ ಸಿಕ್ಕುವ ಪರಿಸ್ಥಿತಿಯಿಲ್ಲ. ಆದುದರಿಂದ ಪ್ರತಿಯೊಂದೂ ಬರೆದು ಇಡಬೇಕು ಎಂದು ಸ್ಪಷ್ಟವಾಗಿ ತಿಳುವಳಿಕೆ ಕೊಟ್ಟಿದ್ದೇನೆ. ಪುಸ್ತಕದಲ್ಲಿ ಬರೆಯುತ್ತಿದ್ದಾರೆ. ಆದರೆ ನನಗೆ ಇತ್ತೀಚೆಗೆ ಪ್ರಶ್ನೆಗೆ ಉತ್ತರ ಬಂದ ಮೇಲೆ ಮತ್ತೆ ಸಮಾಚಾರ ತಿಳಿದುಕೊಂಡಿದ್ದರಲ್ಲಿ, ಒಟ್ಟು 4,12,228 ಏಕರೆ ಭೂಮಿ ಇದೆ. ಅದರಲ್ಲಿ ಹಳೇ ಮೈಸೂರು ಭಾಗ, ಮದ್ರಾಸ್ ಭಾಗ ಸೇರಿ 1 ಲಕ್ಷ 10 ಸಾವಿರ ಏಕರೆ ಜಮೀನು ಆಗುತ್ತದೆ. ಕರಾರುವಾಕ್ಕಾಗಿ ಇಷ್ಟೇ ಎಂದು ಹೇಳುವುದಾದರೆ ಅಂಕಿ ಅಂಶಗಳನ್ನು ಸಂಗ್ರಹಿಸಿ ಉತ್ತರ ಕೊಡಬೇಕಾಗುತ್ತದೆ.

ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು :—ಸರಿಯಾದ ಕಾಗದ ಪತ್ರಗಳು ಇಲ್ಲ ಎಂದು ತಮ್ಮ ಉತ್ತರದಿಂದ ಅರ್ಥವಾಗುತ್ತದೆ. ಜೊತೆಗೆ ಅಣ್ಣಾರಾಯರು ಟೆಂಪಲ್ ಅಡ್ಮಿನಿಸ್ಟ್ರೇಷನ್ ಬಗ್ಗೆ 5 ವರ್ಷದ ಹಿಂದೆ ಒಂದು ರಿಪೋರ್ಟ್ ಕೊಟ್ಟಿದ್ದರು. ಉತ್ತರ ಕೊಡುವಾಗ ಹೇಳಿದಿರಿ ಅದು ಪರಿಶೀಲನೆಯಲ್ಲಿದೆ ಎಂದು. ಈ ಬಗ್ಗೆ ಯಾವ ಕಾರ್ಯಕ್ರಮತೆಗೆದುಕೊಂಡಿದ್ದೀರಿ ? ಇಡೀ ಸಂಸ್ಥಾನದಲ್ಲಿ ಸರಿಯಾದ ಯೂನಿಫಾರಂ ರೆಜಿಸ್ಟ್ರೇಷನ್ ಬಿಲ್ ಇಲ್ಲ ಎನ್ನುವುದನ್ನು ಒಪ್ಪಿಕೊಳ್ಳುತ್ತೀರಾ ? ಮುಜರಾಯ್ ಮ್ಯಾನ್ಯುಯಲೆನ್ನು ಒಂದು ಯೂನಿಫಾರಂ ಮಾಡಲ್ ಬಿಲ್ಲಾಗಿ ಇಷ್ಟು ದಿವಸದಲ್ಲಿ ತರಲು ಪ್ರಯತ್ನ ಮಾಡುತ್ತೀವೆಂದು ಕ್ಯಾಟಗಾರಿಕಲ್ ಅಷ್ಯೂರೆನ್ಸ್ ಕೊಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ : ಸ್ವಾಮಿ, ಅಣ್ಣಾರಾಯರ ಸಲಹೆ ತೆಗೆದುಕೊಂಡು ಒಂದು ಬಿಲ್ ತಯಾರಾಗಿ ಅದು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕೂಡಾ ರೆಫೆರ್ ಆಗಿತ್ತು. ಅದರಲ್ಲಿ ಇತ್ತೀಚೆಗೆ ಕೆಲವು ಬದಲಾವಣೆಗಳನ್ನು ಮಾಡಿ ಈ ಅಧಿವೇಶನದಲ್ಲೇ ಸಾಧ್ಯವಾದರೆ ಅದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ರೆಫರ್ ಮಾಡತಕ್ಕ ಯೋಚನೆ ಇದೆ. ಇಷ್ಟನ್ನು ಈ ಸಭೆಯ ಮುಂದೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ : ತಮ್ಮ ಉತ್ತರದಲ್ಲಿ ಹಳೇ ಮೈಸೂರು, ಕರ್ನಾಟಕ ಮತ್ತು ಕೊಡಗು ಪ್ರದೇಶಗಳಿಂದ ಮಾಹಿತಿ ದೊರೆಯುವಂತಿಲ್ಲ ಎಂದು ಹೇಳಿದಿರಿ. ತಮಗೆ ಪ್ರತ್ಯೇಕವಾಗಿ ಎಂಡೌಮೆಂಟ್ ಕಮಿಷನರ್ ಇದ್ದರೂ

(ಶ್ರೀ ಕಾಗೋಡು ತಿಮ್ಮಪ್ಪ)

ಕೂಡ, ವಿಭಾಗ ಸಿಬ್ಬಂದಿವರ್ಗ ಬೇಕಾದಷ್ಟು ಇದ್ದರೂ ಕೂಡ ಮಾಹಿತಿ ಸಂಪಾದನೆ ಮಾಡಿಲ್ಲ ಎಂದರೆ ಇದು ಸರ್ಕಾರದ ಲೋಪವಲ್ಲವೇ ಸ್ವಾಮಿ ?

ಶ್ರೀ ಎನ್. ಹುಚ್ಚಮಾಸ್ತಿಗೌಡ : ಈಗಾಗಲೇ ಸ್ಪಷ್ಟವಾಗಿ ಹೇಳಿದ್ದೇನೆ. ಹಳೇ ಮೈಸೂರಿನಲ್ಲಿ ತಾಲ್ಲೂಕುಮಟ್ಟದಲ್ಲಿ ಒಂದೊಂದು ರಿಜಿಸ್ಟರ್ ಇದ್ದು, ಸಮಾಚಾರ ಇರಬೇಕು ಎಂದು ಇದೆ. ಆದರೆ ಅನೇಕ ತಾಲ್ಲೂಕು ಆಫೀಸುಗಳಲ್ಲಿ ನಾನು ನೋಡಿದ್ದರಲ್ಲಿ ನಗದು ಎಷ್ಟಿದೆ, ಭೂಮಿ ಎಷ್ಟಿದೆ, ಯಾವುಯಾವುದು ಗೇಣಿದಾರರಿಗೆ ಕೊಟ್ಟಿದೆ ಎಷ್ಟು ವರ್ಷದ ಗೇಣಿ ಬಾಕಿ ಇದೆ, ಇವೆಲ್ಲದರ ಪೂರಾ ಸಮಾಚಾರ ಅದರಲ್ಲಿ ಇಲ್ಲ. ಅದು ನನ್ನ ಗಮನಕ್ಕೆ ಬಂದ ಕೂಡಲೇ ಸರ್ಕ್ಯುಲರ್ ಕೊಟ್ಟು ಇದನ್ನೆಲ್ಲಾ ಸಂಗ್ರಹಿಸಬೇಕು ಎಂದು ಹೇಳಿದೆ. ನಾನು ಇತ್ತೀಚೆಗೆ ನೋಡಿದ್ದರಲ್ಲಿ ಕೆಲವು ತಾಲ್ಲೂಕುಗಳಲ್ಲಿ ಪೂರಾ ಅಂಕಿಅಂಶಗಳನ್ನು ಸಂಗ್ರಹಿಸಿದ್ದಾರೆ. ಪೂರ್ಣವಾಗಿ ಸಂಗ್ರಹಿಸಬೇಕು ಎಂದು ಎರಡು ತಿಂಗಳುವಾಯಿದೆ ಕೊಟ್ಟಿದ್ದೇನೆ ಅಷ್ಟರೊಳಗೆ ಸಂಗ್ರಹಿಸಿ ನಾನು ಕೊಡುತ್ತೇನೆ.

ಶ್ರೀ ಎಸ್ ಎಂ. ಶೀರನಾಳ ಚಂದ್ರಶೇಖರ್ : ಮಾನ್ಯ ನ್ಯಾಯುದ್ಧರವರು ಮಠಗಳ ಆಸ್ತಿ ಬಗ್ಗೆ ಕೇಳಿದ್ದಾರೆ. ಉತ್ತರದಲ್ಲಿ ಈ ವಿಚಾರ ಹೇಳಿಯೇ ಇಲ್ಲ. ಎರಡನೆಯದು (ಇ) ಪ್ರಶ್ನೆಗೆ ಉತ್ತರ ಕೊಟ್ಟಿದ್ದು ನೋಡಿದರೆ, ಭಕ್ತಾದಿಗಳು ನಗದು ಒಡವೆಗಳು ನಿರ್ದಿಷ್ಟವಾದ ಉದ್ದೇಶಕ್ಕೆ ಕಾಣಿಕೆ ಕೊಟ್ಟಿರುವುದರಿಂದ, ಅವುಗಳನ್ನು ಅವರ ಉದ್ದೇಶಕ್ಕಾಗಿ ಬಳಸಲು ಸಾಧ್ಯವಿಲ್ಲ ಎಂದು ಹೇಳಿದ್ದೀರಿ. ನಿರ್ದಿಷ್ಟವಾದ ಉದ್ದೇಶಕ್ಕೆ ಕೊಟ್ಟ ಹಣ ದುರುಪಯೋಗವಾಗುತ್ತಾ ಇದೆ. ಅದನ್ನು ಮುಟ್ಟುಗೋಲು ಹಾಕಿಕೊಂಡು ಸರಿಯಾದ ಉದ್ದೇಶಕ್ಕೆ ಕೊಡುವುದಕ್ಕೆ ಯೋಚನೆ ಮಾಡುತ್ತೀರಾ

ಶ್ರೀ ಎನ್. ಹುಚ್ಚಮಾಸ್ತಿಗೌಡ :—ಪ್ರತ್ಯೇಕವಾಗಿ ಸರ್ಕಾರದ ಆಡಳಿತದಲ್ಲಿರತಕ್ಕಂಥ ದೇವಸ್ಥಾನಗಳಲ್ಲರುವ ಹಣವಾಗಲಿ, ಒಡವೆಗಳಾಗಲಿ ಅದರ ಬಗ್ಗೆ ನಾನು ತಿಳಿಸಿದ್ದೇನೆ. ಇದಲ್ಲದೆ ಬೇರೆ ಖಾಸಗಿಯಾಗಿರುವ ಸಂಸ್ಥೆಗಳನ್ನು ಸರ್ಕಾರಕ್ಕೆ ತೆಗೆದುಕೊಳ್ಳುವಾಗ ಸಂದರ್ಭ ಬಂದಾಗ ಅಂದರೆ, ಆಡಳಿತ ನಡೆಸುವುದಕ್ಕಾಗುವುದಿಲ್ಲ, ಸರ್ಕಾರಕ್ಕೆ ವಹಿಸಬೇಕು ಎನ್ನುವ ಸಂದರ್ಭ ಬಂದಾಗ ಅಥವಾ ಸಾರ್ವಜನಿಕ ಹಣ ಅಪವ್ಯಯವಾಗುತ್ತಿದೆ ಎಂದು ಕಂಡುಬಂದಾಗ, ತೆಗೆದುಕೊಳ್ಳತಕ್ಕ ಸಂದರ್ಭ ಬರುತ್ತದೆ. ಹಾಗೆಯೇ ಎಲ್ಲಪ್ಪ ಟೆಂಪಲ್ ವಿಷಯದಲ್ಲಿ ಮನೂದಾ ಕಾನೂನು ಈ ಸಭೆಯ ಮುಂದೆ ಈಗಾಗಲೇ ಮಂಡಿಸಿದ್ದೇನೆ. ಇದು ಸಭೆಯ ಒಪ್ಪಿಗೆ ಪಡೆದ ಮೇಲೆ ಮುಂದಿನ ಕಾರ್ಯಕ್ರಮ ಯಾವರೀತಿ ತೆಗೆದುಕೊಳ್ಳಬೇಕು ಎಂದು ನಿರ್ಧರಿಸಬೇಕಾಗುತ್ತದೆ.

Smt. Winnifred F. Fernandez : In Madras Karnatak area, you have furnished information regarding temples and mutts as 3,160 and 52 respectively and you have given no information regarding Churches and Mosques. do you mean to say that there are no Churches and Mosques in Madras Karnatak area ?

ಶ್ರೀ ಎನ್. ಹುಚ್ಚಮಾಸ್ತಿಗೌಡ :—ಸರ್ಕಾರದ ಅಧಿಕಾರಕ್ಕೆ ಒಳಪಟ್ಟಿರತಕ್ಕ ಸಂಸ್ಥೆಗಳಿಂದ ನನಗೆ ಬಂದಿರತಕ್ಕ ಸಮಾಚಾರ ತಿಳಿಸಿದ್ದೇನೆ. ಅದೂ ಅಲ್ಲದೆ ಬೇರೆ ಏನಾದರೂ ಇದ್ದರೆ ಪೂರಾ ವಿಷಯ ನಿರ್ದಿಷ್ಟವಾಗಿ ಹೇಳುವ ಸ್ಥಿತಿಯಲ್ಲಿಲ್ಲ. ಎಷ್ಟು ಇದೆ ಎಂಬುದನ್ನು ಸಂಗ್ರಹಿಸಿ ಹೇಳಬೇಕಾಗುತ್ತದೆ.

ಶ್ರೀ ಟಿ. ಎಂ. ಮಂಜುನಾಥ :—ಸ್ವಾಮಿ, ಧಾರ್ಮಿಕ ಹಾಗೂ ಧರ್ಮಾದಾಯಕ್ಕೆ ಸಂಬಂಧಪಟ್ಟ ಜಮೀನುಗಳನ್ನು ಮುಟ್ಟುಗೋಲು ಹಾಕಿಕೊಳ್ಳುವುದಕ್ಕೆ ಈಗ ಲ್ಯಾಂಡ್ ರಿಫಾರ್ಮ್ಸ್ ಆಗಿದೆ. ನನಗೆ ತಿಳಿದಮಟ್ಟಿಗೆ ರಾಷ್ಟ್ರಾಧ್ಯಕ್ಷರು ಪರಿಶೀಲನೆ ಮಾಡಿ ವಾಪಸ್ಸು ಕಳುಹಿಸಿದ್ದಾರೆ ಎಂದು ಕೇಳಿದ್ದೇನೆ. ಇದರ ಬಗ್ಗೆ ಸರ್ಕಾರದ ಉದ್ದೇಶವೇನು ?

ಶ್ರೀ ಎನ್. ಹುಚ್ಚಮಾಸ್ತಿಗೌಡ :—ಇದಕ್ಕೂ ಅದಕ್ಕೂ ಸಂಬಂಧವಿಲ್ಲವೆಂದು ಕಾಣುತ್ತದೆ.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು :— ಇದುವರೆಗೆ ಕೊಟ್ಟಿರುವ ಉತ್ತರ ಸಮಂಜಸವಾಗಿಲ್ಲ. ನಾನು ಈ ಸಂದರ್ಭದಲ್ಲಿ ಮತ್ತೆ ಒತ್ತಿ ಹೇಳುತ್ತೇನೆ. ಈ ಇಲಾಖೆಯನ್ನು ಒಂದು ಸ್ವತಂತ್ರ ಇಲಾಖೆಯಾಗಿ ಮಾಡಿ ಅದಕ್ಕೆ ಪ್ರತ್ಯೇಕ ಮಿನಿಸ್ಟ್ರಿ ಏರ್ಪಾಡುಮಾಡಿ ಇದರಲ್ಲಿ ಕಂಡುಬರತಕ್ಕ ಲೋಪದೋಷಗಳನ್ನು ಬಗೆಹರಿಸಬೇಕು. I want a categorical assurance from the Government to furnish full details about the temples, mosques and Churches in the State. ಇದನ್ನು ಮಾಡಲು ಒಂದು ಹೈ ಪವರ್ ಕಮಿಟಿ ಮಾಡುತ್ತೇವೆ ಎಂದು ಈ ಸಂದರ್ಭದಲ್ಲಿ ಆಶ್ವಾಸನೆ ಕೊಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ : ಈಗಾಗಲೇ ಮುಸ್ಲಿಂ ಇನ್‌ಸ್ಟಿಟ್ಯೂಷನ್ನನ್ನು ವಾಕ್‌ಫ್ ಬೋರ್ಡಿಗೆ ಕೊಟ್ಟುಬಿಟ್ಟಾಗಿದೆ ಉಳಿದ ಸಂಸ್ಥೆಗಳ ಬಗ್ಗೆ ಇರತಕ್ಕ ವರಮಾನವನ್ನು ಇರತಕ್ಕ ಆಸ್ತಿಯನ್ನು ಯಾವರೀತಿ ಉಪಯೋಗಿಸಿಕೊಳ್ಳಬೇಕು ವಗೈರೆ ಎಲ್ಲಾ ಯೋಚನೆ ಮಾಡಬೇಕು. ಅವನ್ನು ಕ್ರಮಪಡಿಸು

(ಶ್ರೀ ಹುಚ್ಚಮಾಸ್ತಿ ಗೌಡ)

ವುದಕ್ಕೆ ಯೋಚನೆ ಮಾಡಬೇಕೆಂದು ಮೂನ್ಯ ಸದಸ್ಯರು ಸಲಹೆ ಮಾಡಿದ್ದಾರೆ. ಇದಕ್ಕೆ ಪ್ರತ್ಯೇಕವಾದ ಇಲಾಖೆ ಇದ್ದೇ ಇದೆ. ಆದರೆ ಅವರ ಮನಸ್ಸಿನಲ್ಲಿ ಏನಾದರೂ ಪ್ರತ್ಯೇಕವಾಗಿ ಇದಕ್ಕೋಸ್ಕರ ಒಂದು ಅಡ್ಮಿನಿಸ್ಟ್ರೇಷನ್ ಇರಬೇಕು ಎಂದರೆ ಅದು ಮುಖ್ಯಮಂತ್ರಿಗಳಿಗೆ ಸೇರಿದಂಥ ವಿಷಯ.

ಈಗ ನನಗೆ ಗೊತ್ತಾಗಿರತಕ್ಕಂಥ ಸಮಾಚಾರದ ಪ್ರಕಾರ ಸುಮಾರು 10 ಕೋಟಿ ರೂಪಾಯಿಯಷ್ಟು ಬೆಲೆ ಉಳ್ಳಂಥ ಚಿನ್ನ ಬೆಳ್ಳಿ ಒಡವೆಗಳು ಇವೆಯೆಂದು ಈಗ ಇರತಕ್ಕಂಥ ಅಂಕ ಅಂಶದ ಪ್ರಕಾರ ಗೊತ್ತಾಗಿದೆ. ಇದನ್ನೆಲ್ಲಾ ಕ್ರಮ ಪಡಿಸಿ ಅದನ್ನು ಯಾವ ರೀತಿ ಮಾಡಬೇಕೆಂಬುದು ಮತ್ತು ಇದಕ್ಕೆ ಒಂದು ಯೂನಿಫಾರಂ ಲೆಜಿಸ್ಲೇಷನ್ ತರತಕ್ಕಂಥಾದ್ದರ ಬಗ್ಗೆ ಇವೆಲ್ಲಾ ಸರ್ಕಾರದ ಪರ್ಯಾಲೋಚನೆಯಲ್ಲಿ ಇದೆ.

FIRE ACCIDENT IN GULBARGA DIST.

SRI PRABHAKAR TELKAR.—In reply to (a) and (b), it is stated that the number of fire accidents in 1971-72 is 195 and the number of huts of cottages burnt is 434. Are there any casulaties or deaths due to those accidents and if so, whether the Government is in a position to give any compensation in such cases?

*ಶ್ರೀ ಎನ್. ಹುಚ್ಚಮಾಸ್ತಿಗೌಡ.— ಈ ಬಗ್ಗೆ ಪೂರಾ ಇನ್‌ಫರ್ಮೇಷನ್ ಈಗ ನನ್ನ ಹತ್ತಿರ ಇಲ್ಲ. ಮತ್ತು ಇದಕ್ಕೆ ಪರಿಹಾರ ಎಷ್ಟು ಕೊಟ್ಟಿದ್ದಾರೆ ಅನ್ನುವ ಅಂಕಿ ಅಂಶ ಸಂಗ್ರಹಿಸುವುದಕ್ಕೆ ಇನ್ನೂ ಆಗಿಲ್ಲ. ಅದಕ್ಕಾಗಿ ಮಾನ್ಯ ಅಧ್ಯಕ್ಷರು ಅಪ್ಪಣೆ ಕೊಟ್ಟರೆ ಈ ಪ್ರಶ್ನೆಯನ್ನು ಮುಂದಕ್ಕೆ ಹಾಕುವುದಕ್ಕೆ ನನ್ನ ಒಪ್ಪಿಗೆ ಇದೆ.

MADAM SPEAKER.—This Question is held over.

T. B. WARD IN PANDIT'S GENERAL HOSPITAL AT SIRSI

60. SMT. RADHA BHATT (Ankola).—

6. Will the Minister for Health be pleased to state :—

(*a*) whether Government is examining the question of constructing a T. B. Ward in the Pandit's General Hospital at Sirsi, North Kanara District;